ತಪ್ಪಿಸಿಕೊಳ್ಳಲಾರ, ಈ ಬಾರಿ ಸಾಕಷ್ಟು ಕ್ಲೂಗಳು ನಮ್ಗೆ ಸಿಕ್ಕಿವೆ, ಡೋಂಟ್ ವರಿ ಮೇಡಂ, ಡೆಫಿನೇಟ್ಲಿ ವಿ ವಿಲ್ ಕ್ಯಾಚ್ ದಿ ಕಲ್ಪ್ರಿಟ್…'

ಇನ್ಸ್‌ಪೆಕ್ಟರ್ ಅಜಯ್ ಕುಲಕರ್ಣಿ ಅಭಯ ನೀಡಿದಾಗ ಪಾರಿಜಾತ ಹಾಗೂ ಭುವನೇಶ್ವರಿಯವರಿಗೆ ಇದ್ದುದರಲ್ಲಿ ಸಮಾಧಾನವೆನಿಸಿತು.

'ಹೇಮಂತ, ನಿನ್ನ ಹಣೆಗೆ ಏನಾಯ್ತಪ್ಪ….ಎನಿ ಆಕ್ಸಿಡೆಂಟ್..?'

ಭುವನೇಶ್ವರಿಯವರು ಆತಂಕದಿಂದ ಹೇಮಂತನನ್ನು ಉದ್ದೇಶಿಸಿ ಕೇಳಿದರು.

'ಹೌದು ಆಂಟಿ, ಮನೆಗೆ ಹೋಗೋವಾಗ ಚಿಕ್ಕದೊಂದು ಆಕ್ಸಿಡೆಂಟಾಯ್ತು..'. ಎಂದ ಹೇಮಂತ ವ್ಯಕ್ತಿಯೊಂದು ತನ್ನ ಮೇಲೆ ದಾಳಿ ಮಾಡಿದ ವಿಷಯವನ್ನು ಬೇಕೆಂದೇ ಮರೆಮಾಚಿದ. ಹೇಳಿದರೆ ಸುಮ್ಮನೆ ಆತಂಕ, ವೃಥಾ ಆತಂಕವನ್ನೇಕೆ ಸೃಷ್ಟಿ ಮಾಡಬೇಕು?

ಸ್ವಲ್ಪ ಹೊತ್ತು ಅವರೊಂದಿಗೆ ಮಾತನಾಡಿ ಇಬ್ಬರೂ ಮೇಲೆದ್ದರು.

'ಮೇಡಂ, ಡೋಂಟ್ ವರಿ, ಆದಷ್ಟೂ ಬೇಗ ಕೊಲೆಗಾರನನ್ನು ಪತ್ತೆ ಮಾಡಿ ನಿಮ್ಮ ಮುಂದೆ ನಿಲ್ಲಿಸ್ತೀವಿ..' ಎಂದು ಹೇಮಂತ ಪಾರಿಜಾತರನ್ನು ಉದ್ದೇಶಿಸಿ ಹೇಳಿದಾಗ ಅವನ ಕಣ್ಣುಗಳು ಆತ್ಮವಿಶ್ವಾಸದಿಂದ ಹೊಳೆಯುತ್ತಿದ್ದವು.

* * *

## ಋತುವಿನ ಆತಂಕ

ಋತುವಿಗೆ ಹೇಮಂತನನ್ನು ಕೊನೆಗೂ ಮಾತನಾಡಿಸಲಾಗಲಿಲ್ಲ. ದೂರದಿಂದ ಅವನನ್ನು ನೋಡಿದ್ದೆಷ್ಟೋ ಅಷ್ಟೇ. ಪ್ರಿನ್ಸಿಪಾಲ್ ಚೇಂಬರಿಗೆ ಅವನು ಅಜಯ್ ಕುಲಕರ್ಣಿಯೊಂದಿಗೆ ಹೋಗುವುದನ್ನು ನೋಡಿದ್ದಳು ಅವಳು. ಆದರೆ ಮಾಧ್ಯಮಗಳವರ ವಿವಿಧ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲೇ ಸಮಯ ಕಳೆದಿತ್ತು. ಜೊತೆಗೆ ಸ್ವರೂಪ, ಪ್ರದೀಪರನ್ನು ಕಳೆದುಕೊಂಡ ಪೋಷಕರನ್ನು ಸಮಾಧಾನಪಡಿಸುವುದರಲ್ಲಿ ಅಧ್ಯಾಪಕಿಯರೆಲ್ಲಾ ನಿರತರಾಗಿದ್ದರು. ಹೆತ್ತ ಕುಡಿಗಳನ್ನು ಕಳೆದುಕೊಂಡ ಅವರ ಸಂಕಟ ಎಂತಹ ಕಲ್ಲೆದೆಯವರನ್ನೂ ಕರಗಿಸುವಂತಿತ್ತು.

ಇಷ್ಟೆಲ್ಲಾ ಗಡಿಬಿಡಿಯ ನಡುವೆಯೂ ಅವಳು ಹೇಮಂತನ ಹಣೆಯ ಮೇಲಿದ್ದ ಬ್ಯಾಂಡೇಜನ್ನು ಗಮನಿಸಿದ್ದಳು. ಏನಾಯಿತು?

ನಿನ್ನೆ ರಾತ್ರಿ ಬಂಗಲೆಗೆ ಬಂದಾಗ ಚೆನ್ನಾಗಿಯೇ ಇದ್ದ ಹೇಮಂತನಿಗೆ ಏನಾಯಿತೆಂದೇ ತಿಳಿಯಲಿಲ್ಲ. ಹೇಳಿ ಕೇಳಿ ಖಾಸಗಿ ಪತ್ತೇದಾರ. ತಾನಾಗಿಯೇ ಯಾವುದಾದರೂ ಅಪಾಯವನ್ನು ಮೈಗೆಳೆದುಕೊಂಡಿರಬಹುದೇ?….ಅವಳಿಗೆ ಒಂದು ಕ್ಷಣ ಭಯವಾಯಿತು. ತಾನು ಪ್ರೀತಿಸಿದ್ದ ಹೇಮಂತ ಈಗ ತನ್ನ ಕೈಗೆ ಸಿಕ್ಕಿದ್ದಾನೆ. ಅವನಿಗೆ ಕೂದಲೆಳೆಯ ಅಪಾಯವಾದರೂ ತನ್ನ ಹೃದಯ ಅದನ್ನು ತಡೆದುಕೊಳ್ಳುತ್ತದೆಯೇ? ಅವನೊಬ್ಬ ಜೊತೆಗಿದ್ದರೆ ಸಾಕು ಮತ್ತೇನೂ ಬೇಡವೆನಿಸಿಬಿಟ್ಟಿತು ಅವಳಿಗೆ.

ಕಾಲೇಜಿನ ಆವರಣದಿಂದ ಅವಳು ರಮ್ಯಾಳೊಂದಿಗೆ ಹೊರ ಬರುವ ವೇಳೆಗೆ ಮಧ್ಯಾಹ್ನವಾಗಿತ್ತು. ಕಾಲೇಜಿಗೆ ಅಘೋಷಿತ ರಜೆಯನ್ನು ನೀಡಲಾಗಿತ್ತು. ಕೊಲೆಗಾರನ ಪತ್ತೆಯಾದರೆ ಮಾತ್ರ ಕಾಲೇಜು ಆರಂಭವಾಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಾಸ್ಟೆಲ್ಲಿನ ಹುಡುಗರೆಲ್ಲಾ ತಮ್ಮ ತಮ್ಮ ರೂಮುಗಳನ್ನು ಖಾಲಿ ಮಾಡಿ ಊರಿಗೆ ಹೊರಡುತ್ತಿರುವ ದೃಶ್ಯ ಮನಕಲಕುವಂತಿತ್ತು. ತನ್ನದೇ ಒಂದು ಇಮೇಜನ್ನು ಕಳೆದ 15 ವರ್ಷಗಳಿಂದ ಸೃಷ್ಟಿಸಿಕೊಂಡಿದ್ದ ಜ್ಞಾನದೇಗುಲ ಕಾಲೇಜು ಇಂದು ಸಂಕಷ್ಟದಲ್ಲಿತ್ತು. ರಕ್ತಪಿಪಾಸುವೊಬ್ಬನ ದುಷ್ಕೃತ್ಯಕ್ಕೆ ತನ್ನನ್ನೇ ಆಹುತಿ ಕೊಡಲು ಮೌನವಾಗಿ ಸಜ್ಜಾಗುತ್ತಿತ್ತು.

## ನೋಟ

ನಲ್ಲೆ
ಹಾಗೆ ನೋಡಬೇಡ ಬೇರೆಡೆ
ಹಾಯಿಸು ನಿನ್ನ ನೋಟ
ಆಮೇಲೆ ನನ್ನನ್ನು ದೂರಬೇಡ
ಅತಿಯಾಯಿತೆಂದು ನನ್ನ
ಕಾಟ!

★ ಆರ್. ಸುನೀಲ್ ತರೀಕೆರೆ



'ಋತು, ನೀವೆಲ್ಲಾ ಹೊರಡಿ, ಏನಾದ್ರೂ ತಿಳಿಸೋದಿದ್ರೆ ಕಾಂಟ್ಯಾಕ್ಟ್ ಮಾಡ್ತೀವಿ'; ಭುವನೇಶ್ವರಿಯವರು ಕಣ್ತುಂಬಿಕೊಂಡಾಗ ಎಲ್ಲರಿಗೂ ಸಂಕಟವಾಯಿತು. ಒಂದೇ ಮನೆಯವರಂತೆ ಎಲ್ಲರೂ ಸೇರಿ ಜ್ಞಾನದೇಗುಲ ವನ್ನು ಬೆಳೆಸಿದ್ದರು. ಹೆತ್ತ ಮಗುವನ್ನು ಕಳೆದುಕೊಂಡಂತೆ ವಿಲವಿಲನೆ ಒದ್ದಾಡುತ್ತಿತ್ತು ಎಲ್ಲರ ತಪ್ತ ಹೃದಯ.

'ಋತು, ನನ್ನನ್ನು ಪಿಜಿಯಲ್ಲೇ ಬಿಟ್ಟು ಬಿಡೇ, ಅಪ್ಪಾಜಿ ಕಾಲ್ ಮಾಡಿದ್ರು, ಇಲ್ಲಿದ್ದು ನಾನಾದ್ರೂ ಏನ್ಮಾಡ್ಲಿ, ನಂದಿಗೆ ಹೋಗಿ ಸ್ವಲ್ಪ ದಿನ ಇದ್ದು ಬರ್ತೀನಿ, ಅಷ್ಟರಲ್ಲಿ ಕಾಲೇಜಿನ ಪ್ರಾಬ್ಲಮ್ಮೂ ಸಾಲ್ವ್ ಆಗ್ಬಹುದು' ರಮ್ಯಾಳೆಂದಾಗ ಋತುವಿಗೆ ಗಾಬರಿಯೇ ಆಯಿತು. ಈ ಪರಿಸ್ಥಿತಿಯಲ್ಲಿ ತನ್ನನ್ನು ಒಬ್ಬಳೇ ಬಿಟ್ಟು ರಮ್ಯ ಊರಿಗೆ ಹೋದರೆ ತನ್ನ ಗತಿ….ಚಿಕ್ಕಮ್ಮನ ಶೀತಲಯುದ್ಧ ಇನ್ನೂ ಮುಂದುವರಿದಿದೆ….ಹೇಮಂತ ತನಿಖೆಯಲ್ಲಿ ಬಿಜಿಯಾಗಿದ್ದಾನೆ. ಕೋಟೆ ಬಂಗಲೆಯ ನೀರವ ಮೌನದಲ್ಲಿ ತಾನಿನ್ನು ಬಂಧಿಯಾಗಬೇಕು.

'ರಮ್ಯ….ಪ್ಲೀಸ್ ಕಣೆ, ಇವತ್ತೊಂದು ದಿನವಾದ್ರೂ ನನ್ನ ಜೊತೆ ಇರು ಪ್ಲೀಸ್, ಮೊದ್ಲಾದ್ರೆ ಚಿಕ್ಕಮ್ಮನಾದ್ರೂ ಬಾಯ್ತುಂಬ ಮಾತಾಡ್ತಿದ್ರು, ಈಗ ಅವಳೂ ಸರಿಯಾಗಿ ಮಾತನಾಡ್ತಿಲ್ಲ, ಇನ್ನು ಪಪ್ಪ ಯಾವಾಗ್ಲೋ ಬರ್ತಾರೆ, ಯಾವಾಗ್ಲೋ ಹೋಗ್ತಾರೆ, ಮಾತನಾಡಲಾರದ ಭರತ, ಮಾತನಾಡಲು ಗೊತ್ತಿದ್ದೂ ಮಾತನಾಡಲಾರದ ಮುಸುಂಡಿ ಸುಂದರಿ, ಸಿಡುಬಿನ ಕಲೆಯ ಭಯಂಕರ ಮುಖದ ಚಂದ್ರಪ್ಪ….ಇಲ್ಲ ರಮ್ಯ, ನಂಗೆ ಬಂಗ್ಲೆಯಲ್ಲಿ ಒಂಟಿಯಾಗಿ ಇರಲು ಭಯವಾಗ್ತಿದೆ.'

ಪುಟ್ಟ ಮಗುವಿನಂತೆ ಋತು ಅಂಗಲಾಚಿದಾಗ ರಮ್ಯಾಳಿಗೆ ಅಯ್ಯೋ ಎನಿಸಿತು. ಕೋಟೆ ಬಂಗಲೆಯ ರಾಜಕುಮಾರಿ….ಎಲ್ಲ ಸುಖ ಸವಲತ್ತುಗಳೂ ಅವಳ ಪಾಲಾಗಿದೆ, ಬಯಸಿದ್ದನ್ನು ಕ್ಷಣಾರ್ಧದಲ್ಲಿ ತಂದು ಕೊಡುವ ತಂದೆ ಇದ್ದಾರೆ, ಆದರೂ….ಅವಳು ಮಾನಸಿಕವಾಗಿ ಸುಖಿಯಲ್ಲ, ಹುಟ್ಟಿದ ಹಬ್ಬದ ದಿನವೇ ಓಡಿಹೋದ ಅಮ್ಮನ ನೆನಪು ಸದಾ ಅವಳನ್ನು ಘಾಸಿಗೊಳಿಸುತ್ತಲೇ ಇರುತ್ತದೆ. ಈಗ ಮೆಚ್ಚಿದ ಹೇಮಂತನ ಒಡನಾಡಿಯಾಗಿ ಸಂತೋಷವಾಗಿ ಇರೋಣವೆಂದರೆ ಕಾಲೇಜಿನಲ್ಲಿ ಭೀಕರವಾದ ಸರಣಿ ಕೊಲೆಗಳು….ಪಾಪದ ಹುಡುಗಿ ಸಾಕಷ್ಟು ಹೆದರಿದ್ದಾಳೆ.

'ರಮ್ಯ, ನನ್ನ ಮಾತಿಗೆ ನೀನೇನೂ ಹೇಳ್ಲೇ ಇಲ್ಲ, ಪ್ಲೀಸ್ ಕಣೆ…'

'ಆಯ್ತಮ್ಮಾ ತಾಯಿ, ನೀನು ಬೇಜಾರು ಮಾಡ್ಕೋಬೇಡ, ಈಗ ಏನು, ನಿನ್ನ ಜೊತೆ ಕೋಟೆ ಬಂಗ್ಲೆಗೆ ಬರ್ಬೇಕು ತಾನೇ, ಬರ್ತೀನಿ ಬಿಡು, ಸ್ವಲ್ಪ ಹೊತ್ತು ನಮ್ಮ ಪಿಜಿಗೆ ಹೋಗಿ ಮತ್ತೆ ನಿಮ್ಮ ಬಂಗ್ಲೆಗೆ ಹೋಗೋಣ, ಸರೀನಾ…?'

ರಮ್ಯಾಳೆಂದಾಗ ಋತುವಿಗೂ ಸಂತೋಷವಾಯಿತು. ಸದ್ಯ ಗೆಳತಿ ತನ್ನೊಂದಿಗೆ ಬಂಗಲೆಯಲ್ಲಿರಲು ಒಪ್ಪಿದಳಲ್ಲ.

ಇಬ್ಬರೂ ತಮ್ಮ ಎಂದಿನ ರೆಸ್ಟೋರೆಂಟಿನಲ್ಲಿ ಊಟ ಮುಗಿಸಿ ಪಿಜಿಯತ್ತ ಸಾಗಿದರು. ಸಂಜೆಯವರೆಗೂ ಮಾತನಾಡುತ್ತಾ ಕಾಲ ಕಳೆದು ಕತ್ತಲಾಗುವ ವೇಳೆಗೆ ಕೋಟೆ ಬಂಗಲೆಯನ್ನು ತಲುಪಿದರು.

## ಬಂಗಲೆಗೆ ಬಂದ ಹೇಮಂತ

ಬಂಗಲೆಯ ಗೇಟಿನ ಮುಂದೆ ಹೇಮಂತನ ಕೆನೆ ಬಣ್ಣದ ಕಾರು ನಿಂತಿತ್ತು. ಅದನ್ನು ನೋಡಿ ಇಬ್ಬರೂ ಆಶ್ಚರ್ಯದಿಂದ ಕಣ್ಣರಳಿಸಿದರು.

ಅನುಮಾನವೇ ಇರಲಿಲ್ಲ. ಬಂಗಲೆಯೊಳಗಿನ ದೊಡ್ಡ ಹಜಾರದಲ್ಲಿ ತನ್ನ ಎಂದಿನ ಮಂದಹಾಸದಲ್ಲಿ ಕಲಾವತಿಯೊಂದಿಗೆ ಮಾತಿನಲ್ಲಿ ತೊಡಗಿದ್ದ ಹೇಮಂತ.

ಒಳಬಂದ ಋತು ಹಾಗೂ ರಮ್ಯಾರನ್ನು ತಲೆಯೆತ್ತಿ ನೋಡಿ ಸಂತೋಷ ದಿಂದ ಮುಖವರಳಿಸಿದ. ಕಾಲೇಜಿನಲ್ಲಿ ತನ್ನ ಹುಡುಗನನ್ನು ಮಾತನಾಡಿಸಲು ಸಾಧ್ಯವಾಗದೇ ಇದ್ದುದಕ್ಕೆ ಪರಿತಪಿಸುತ್ತಿದ್ದ ಋತುವಿಗೆ ಈಗ ಅವನನ್ನು ತಮ್ಮ ಬಂಗಲೆಯಲ್ಲೇ ನೋಡಿ ಹಿಡಿಸಲಾರದಷ್ಟು ಸಂತೋಷವಾಯಿತು.

ಒಳಬಂದವರನ್ನು ನೋಡಿ ಹೇಮಂತನಿಗೆ ಸಂತೋಷವಾದರೆ ಕಲಾವತಿಯ ಮುಖ ಅಸಹನೆಯಿಂದ ಗಂಟಿಕ್ಕಿತು.

'ಋತು, ಬೆಳಿಗ್ಗೆ ಕಾಲೇಜಿಗೆ ಹೋದವ್ಳು ಈಗ ಬಂಗಲೆಗೆ ಬರ್ತಿದ್ದಿ, ನಂಗೆಷ್ಟು ಆತಂಕವಾಗಿತ್ತು ಗೊತ್ತಾ? ನಿನ್ನ ಮೊಬೈಲಿಗೆ ಎಷ್ಟು ಟ್ರೈ ಮಾಡಿದ್ರೂ ಸ್ವಿಚ್ ಆಫ್ ಆಗಿತ್ತು, ಹೀಗ್ಯಾಕೆ ಮಾಡ್ತಿ ನೀನು?' ರೇಗಿದರು.

ತಾನು ರಾತ್ರಿ ಮೊಬೈಲನ್ನು ಚಾರ್ಜ್ ಮಾಡದಿರುವುದು ನೆನಪಾಯಿತು